ಅ.ದಾವಾ ನಂಬರ್ **242/2015** ಪಿ.ಡಬ್ಲ್ಯೂ - **1**

ದಿನಾಂಕಃ **08/04/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ ಎ.ಎಸ್. ವಕೀಲರಿಂದಃ

ನಾನು ನನ್ನ ಪ್ರಮಾಣಪತ್ರ ಸಲ್ಲಿಸುವಾಗ ದಾವೆಯ ಮೂಲವಾದಿ ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ನೋಡಿರುತ್ತೇನೆ. ನಿ ಪಿ 4 ನ್ನು ನಾನು ಒಪ್ಪಿ ಹಾಜುರುಪಡಿಸಿರುತ್ತೇನೆ. ಸರ್ವೆ ನಂಬರ್ 149 ರ ಒಟ್ಟು ವಿಸ್ತೀರ್ಣ 18 ಗುಂಟೆ ಇರುತ್ತದೆ. ಸದರಿ ಸರ್ವೆ ನಂಬರ್ ನ ಒಟ್ಟು ವಿಸ್ತೀರ್ಣದ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಸದರಿ ಜಾಗದಲ್ಲಿ ಎಷ್ಟು ಖರಾಬು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಾಗದಲ್ಲಿ ಒಟ್ಟು ಎಷ್ಟು ಹಿಸ್ಸೆ ಗಳು ಇವೆ ಎಂದು ನನಗೆ ಗೊತ್ತಿಲ್ಲ. ವಾದಿಯು ಯಾವ ಹಿಸ್ಸೆಯನ್ನು ಸದರಿ ಜಾಗದಲ್ಲಿ ಖರೀದಿಸಿರುತ್ತಾರೆ ಎಂದ ನನಗೆ ಗೊತ್ತಿಲ್ಲ. ನಿ ಪಿ 4 ರಲ್ಲಿ ಇರುವ ಹಿಸ್ಸೆ ನಂಬರ್ 7 ರ ಉತ್ತರಕ್ಕೆ 3 ಮತ್ತು 4 ಹಿಸ್ಸೆ ಎಂದು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ಹಿಸ್ಸಾ ನಂಬರ್ 3 ಮತ್ತು 4 ಎಂದು ನಮೂದಾಗಿದ್ದರೂ ಸುಳ್ಳು ಹೇಳುತ್ತಿದ್ದೀರಿ

ಎಂದರೆ ಸರಿಯಲ್ಲ. ಸದರಿ ನಿ ಪಿ 4 ರಲ್ಲಿ ದಕ್ಷಿಣಕ್ಕೆ 148 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನಗೆ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ.

ಆನಂದ್ ಎನ್ನುವವರು ಪ್ರತಿವಾದಿ ಮೇಲೆ ಓ ಎಸ್ 258/18 ಎಂಬ ದಾವೆಯನ್ನು ಹೂಡಿರುವುದು ಎಂದು ನನಗೆಗ ತಿಳಿದಿಲ್ಲ.

ನಾನು ಓ ಎಸ್ 69/1998 ರ ದಾವೆಯ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಮಾಹಿತಿ ನೀಡಿಲ್ಲ. ಎಮ್ ಆರ್ ನಂ. 8/1999 -2000 ರನ್ನು ನಾನು ನೋಡಿರುತ್ತೇನೆ.

ವಾದಿಯು ದಾವಾ ಆಸ್ತಿಯನ್ನು ಅನ್ಯ ಸಂಕ್ರಮಣ (conversion for non agricultural purpose) ಮಾಡಿಸಿದ್ದರೆಂದು ನನಗೆ ಗೊತ್ತಿಲ್ಲ.

ಸಾಕ್ಷಿ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಗಿದೆ.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ